**CW1**

# ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಬೆಳ್ತಂಗಡಿ

O.S.No. 304/2017

| | |
|---|---|
| ಹೆಸರು | :ಗುರುನಾಥ್ ಎಂ.ಬಿ |
| ತಂದೆಯ ಹೆಸರು | :ದೊಳ್ಳೇಗೌಡ |
| ಪ್ರಾಯ | :40 ವರ್ಷ |
| ಉದ್ಯೋಗ | :ಸರ್ವೇಯರ್ |
| ವಾಸ | :ಬೆಳ್ತಂಗಡಿ |

ದಿನಾಂಕ **13.01.2023** ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.

ಮುಖ್ಯ ವಿಚಾರಣೆಃ

ಈ ದಾವೆಯಲ್ಲಿ ನನಗೆ ಸ್ವತ್ತನ್ನು ಅಳತೆ ಮಾಡಲು ಕಮಿಷನರ್ ವಾರಂಟ್ ಬಂದಿತ್ತು. ಅದರಂತೆ ನಾನು ಎರಡೂ ಪಕ್ಷಗಾರರಿಗೆ ದಿಃ 1.1.2020 ರಂದು ನೋಟೀಸ್ ಜಾರಿ ಮಾಡಿ ಅಳತೆ ಇದೆ ಎಂದು ತಿಳಿಸಿರುತ್ತೇನೆ. ಆಗ 2 ನೇ ಪ್ರತಿವಾದಿಯ ಪರವಾಗಿ ರಾಜೇಶ್ ಎಂಬುವವರು ಆಕ್ಷೇಪಣೆಯನ್ನು ಸಲ್ಲಿಸಿರುತ್ತಾರೆ. ಅದೇ ದಿನ ಬೌಂಡ್ರಿಯನ್ನು ಫಿಕ್ಸ್ ಮಾಡಿರುತ್ತೇನೆ. ವಾದಿಯ ಪರವಾಗಿ ಆದ ತೀರ್ಪಿನ ನಕಲು ಇದ್ದು ಅದರಂತೆ ವಾದಿಗೆ 21 ಸೆಂಟ್ಸ್ ಬಂದಿದ್ದು, ಅದರಂತೆ 21 ಸೆಂಟ್ಸ್ ಜಾಗದ ಬೌಂಡ್ರಿ ಫಿಕ್ಸ್ ಮಾಡಿ ಪಾಯಿಂಟ್ ಗಳನ್ನು ಮಾಡಿ ವಾದಿಗೆ ತೋರಿಸಿ ಬಂದಿರುತ್ತೇನೆ. ಅಲ್ಲದೇ ಸ್ಥಳದಲ್ಲಿ ವಾದಿ ಮತ್ತು ಪ್ರತಿವಾದಿಯ ಹೇಳಿಕೆಯನ್ನೂ ಸಹ ಪಡೆದುಕೊಂಡಿರುತ್ತೇನೆ ಹಾಗೂ ನಕ್ಷೆಯನ್ನು ಸಹ ಮಾಡಿರುತ್ತೇನೆ. ನಂತರ ನ್ಯಾಯಾಲಯಕ್ಕೆ ವರದಿಯನ್ನು ಸಲ್ಲಿಸಿರುತ್ತೇನೆ.

ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಆರ್.ಜೆ.ಡಿ ವಕೀಲರಿಂದಃ

ನಾನು ಸುಮಾರು 10 ವರ್ಷಗಳಿಂದ ಸರ್ವೆಯರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಸರ್ವೆಯನ್ನು ಯಾವ ರೀತಿ ಮಾಡಬೇಕು ಎಂಬ ನಿಯಮಾವಳಿಯ ಬಗ್ಗೆ ಅನುಭವ ಇದೆ. ಸಾಕ್ಷಿಗೆ ದಿಃ 16.11.2002 ರ ಸರ್ಕಾರದ ಸುತ್ತೋಲೆಯನ್ನು ತೋರಿಸಿ ಸದರಿ ಸುತ್ತೋಲೆಯನ್ನು ಮೋಜಣಿ ಕಾರ್ಯವನ್ನು ಮಾಡಬೇಕು ಎಂದು ಕೇಳಲಾಗಿ ಸಾಕ್ಷಿ ಒಪ್ಪಿದ ಮೇರೆಗೆ ಸದರಿ ದಾಖಲೆಯನ್ನು ಗುರುತಿಸುವ ಸಲುವಾಗಿ (for identification) **ನಿ.ಎ.1** ಎಂದು ಗುರುತಿಸಲಾಯಿತು.

ಎಲ್.ಆರ್.ವೈ ಕಡತದ ಬಗ್ಗೆ ತಾಲೂಕು ಕಚೇರಿಯವರು ಒಂದು ಹಿಂಬರಹವನ್ನು ನೀಡಿದ್ದಾರೆ ಎಂದರೆ ಸರಿ. ಸದರಿ ಹಿಂಬರಹವನ್ನು ಸಾಕ್ಷಿ ನೋಡಿ ಗುರುತಿಸಿದ ಮೇರೆಗೆ ಗುರುತಿಸುವ ಸಲುವಾಗಿ (for identification) **ನಿ.ಎ.2** ಎಂದು ಗುರುತಿಸಲಾಯಿತು. ಉಜಿರೆ ಗ್ರಾಮದ ಸ.ನಂದಃ 98/4 ಸಂಪೂರ್ಣವಾದ ಸ್ವತ್ತು ಎಂದರೆ ಸರಿ. ಸ.ನಂಃ 98/4 ರಲ್ಲಿ ದಾವಾ ಸ್ವತ್ತು ಅಡಕವಾಗಿರುವ ಒಂದು ಭಾಗ ಎಂದರೆ ಸರಿ. ಕಮಿಷನರ್ ವಾರಂಟ್ ಹೊರಡಿಸಿದಾಗ ನ್ಯಾಯಾಲಯದಿಂದ ನಮಗೆ ಯಾವುದೇ ನಕ್ಷೆ ಬಂದಿರುವುದಿಲ್ಲ. ಸ್ಥಳದಲ್ಲಿ ವಾದಿ ಪರ ವಕೀಲರು ಹಾಜರು ಪಡಿಸಿದ ಭೂ ನ್ಯಾಯ ಮಂಡಳಿ ನಕ್ಷೆ ಎನ್ನಲಾದ ನಕ್ಷೆಯನ್ನು ನೋಡಿ ಸ್ಥಳವನ್ನು ಅಳತೆ ಮಾಡಿರುತ್ತೇನೆ ಎಂದರೆ ಸರಿ. ಸ.ನಂಃ 98/4 ರಲ್ಲಿ ವಾದಿಯ ಜಮೀನನ್ನು ಹೊರತು ಪಡಿಸಿ ಬೇರೆಯವರ ಜಮೀನು ಸಹ ಇದೆ ಎಂದರೆ ಸರಿ. ಸ್ಥಳಕ್ಕೆ ಅಳತೆ ಮಾಡಲು ಹೋಗುವ ಪೂರ್ವದಲ್ಲಿ ಆಜು ಬಾಜುದಾರರಿಗೆ ನೋಟೀಸು ನೀಡಿರುವುದಿಲ್ಲ, ವಾದಿ ಮತ್ತು ಪ್ರತಿವಾದಿಗೆ ಮಾತ್ರ ನೋಟೀಸು ನೀಡಿರುತ್ತೇನೆ . ಅಳತೆ ಮಾಡುವಾಗ ಸುಂದರ ಗೌಡ ಎಂಬುವವರು ಆಕ್ಷೇಪ ಮಾಡಿದ್ದಾರೆ ಎಂದರೆ ನನಗೆ ನೆನಪಿಲ್ಲ.

ಕಮಿಷನರ್ ವರದಿಯ ಜೊತೆ ಲಗತ್ತಾಗಿರುವ ವಾದ ಪತ್ರದಲ್ಲಿ ಗಡಿಗುರುತುಗಳು ಇರುವುದಿಲ್ಲ. ಪ್ಲಾಟಿಂಗ್ ಆಗದ ಜಮೀನುಗಳ ಗಡಿ ಗುರುತುಗಳನ್ನು ಗುರುತಿಸಲಾಗುವುದಿಲ್ಲ ಆದರೆ ತೀರ್ಪು ನೀಡುವಾಗ ಆಗಿರುವ ನಕ್ಷೆಯನ್ನು ನೋಡಿ ಗಡಿಗುರುತುಗಳನ್ನು ಗುರುತಿಸಿದ್ದೇನೆ. ಸರ್ವೆ ಮ್ಯಾನ್ಯುವಲ್ ರೀತಿಯಲ್ಲಿ ಅಳತೆ ಕಾರ್ಯವನ್ನು ಮಾಡಿಲ್ಲ ಎಂದರೆ ಸರಿಯಲ್ಲ. ಸರ್ವೆ ನಂಃ 98/4 ರಲ್ಲಿ ಎಷ್ಟು ವಿಸ್ತೀರ್ಣದ ಸ್ವತ್ತು ಇದೆ ಎಂದು ನೋಡಿರುತ್ತೇನೆ. ವಾದಿಗೆ ಸಹಾಯ ಮಾಡಲು ಸುಳ್ಳು ವರದಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇರುವುದಿಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

**(ಸಾ.ಓ.ಹೇ.ಕೇ.ಸ.ಇ.ಎ.ಒ)**

ಪ್ರಭಾರ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಬೆಳ್ತಂಗಡಿ